ಈ) 1. ಮಿಶ್ರತಳಿ ಹಸುಗಳ ಸಾಕಾಣಿಕೆ

2. ವಿವಿಧ ಆರ್ಥಿಕ ಮತ್ತು ಸಾಮೂಹಿಕ ಕಾರ್ಯಕ್ರಮಗಳಿಗೆ ಜಾನುವಾರುಗಳ ಸರಬರಾಜು.

3. ಸೂರ್ತಿ ಎಮ್ಮೆಗಳ ಸಾಕಾಣಿಕೆ

4. ಮೇವು : ಬೀಜ ಉತ್ಪಾದನೆ ಹಾಗೂ ವಿತರಣೆ

5. ರೈತರಿಗೆ ಪಶುಸಂಗೋಪನೆ ಬಗ್ಗೆ ತರಬೇತಿ ನೀಡಿದೆ.

6. ವಿದೇಶ ತಳಿ ಹಂದಿ ಸಾಕಾಣಿಕೆ ಹಾಗೂ ಹಂದಿ ಮರಿಗಳ ವಿತರಣೆ

ಉ) 1. ಯೋಜನೆಯಲ್ಲಿ ರೂ. 37.55 ಲಕ್ಷ

2. ಯೋಜನೇತರದಲ್ಲಿ ರೂ. 12. 82 ಲಕ್ಷ

ಊ) ಇಲ್ಲ.

ದ. ಕನ್ನಡ ಜಿಲ್ಲೆಯಲ್ಲಿ ಕಟ್ಟಲಾದ ರಂಗಮಂಟಪ

2032 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟ್ಟಲಾದ ರಂಗಮಂಟಪದ ಅಂದಾಜು ಮೊತ್ತವೆಷ್ಟು?*

2. *ಈ ಹಣವನ್ನು ಯಾವ ರೀತಿಯಿಂದ ಸಂಗ್ರಹಿಸಲಾಯಿತು?*

3. *ಇದಕ್ಕೆ ಈ ತನಕ ಖರ್ಚಾದ ಒಟ್ಟು ಮೊತ್ತವೆಷ್ಟು?*

4. *ಈಗಲೂ ಅಧಿಕಾರಿಗಳು ಈ ಹೆಸರಿನಲ್ಲಿ ಹಣ ಸಂಗ್ರಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

5. *ಬಂದಿದ್ದರೆ ಈ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರ) :

1. 96.00 ಲಕ್ಷ ರೂ.

2. 1. ಇದರಲ್ಲಿ ಸರ್ಕಾರದ ವಂತಿಗೆಯಾಗಿ ಒಟ್ಟು 2.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ.

2. ಸಾರ್ವಜನಿಕರಿಂದ ಒಟ್ಟು 16,03,070.00 ರೂ.ಗಳನ್ನು ಸಂಗ್ರಹಿಸಲಾಗಿದೆ.

3. ಕೂಪನ ಮಾರಾಟದಿಂದ ಬಂದ ಹಣ 14,90,330.00 ರೂ.ಗಳು

ಒಟ್ಟು 32,93,400,00 ರೂ.ಗಳು

3) 41,280.00 ರೂ.

4. ಹೌದು.

5. ರಂಗಮಂದಿರ ನಿರ್ಮಾಣಕ್ಕೆ ಸಾರ್ವಜನಿಕರಿಂದ ಹಣ ಸಂಗ್ರಹ ಮಾಡಲು ಸರ್ಕಾರದಿಂದ ಅನುಮತಿ ನೀಡಲಾಗಿದೆ. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಸಮಿತಿಗಳ ಮೂಲಕ ನಿರ್ಧಾರ ತೆಗೆದುಕೊಂಡ ಪ್ರಕಾರ ರಂಗಮಂದಿರ ನಿರ್ಮಾಣಕ್ಕೆ ಹಣ ಸಂಗ್ರಹ ಮಾಡಲಾಗುತ್ತಿದೆ.

ಪುತ್ತೂರಿನಲ್ಲಿರುವ ವಾರ್ತಾ ಮತ್ತು ಪ್ರಸಾರ ಇಲಾಖೆಯ ಸ್ಥಳಾಂತರ

2033 - ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರಿನಲ್ಲಿರುವ ವಾರ್ತಾ ಮತ್ತು ಪ್ರಸಾರ ಇಲಾಖೆಯನ್ನು ಪುತ್ತೂರಿನಿಂದ ಸ್ಥಳಾಂತರಿಸುವ ಇರಾದೆ ಸರ್ಕಾರಕ್ಕಿದೆಯೇ?

ಆ) ಇದ್ದರೆ, ಅದಕ್ಕೆ ಕಾರಣಗಳೇನು?

ಇ) ಈಗಾಗಲೇ ಸುಸಜ್ಜಿತವಾದ ಕಟ್ಟಡವನ್ನು ವಾರ್ತಾ ಮತ್ತು ಪ್ರಚಾರ ಇಲಾಖೆ ಹೊಂದಿದ್ದು, ಇದಕ್ಕೆ ಒಂದು ಒಂದು ವಾಹನ ಒದಗಿಸುವ ಕುರಿತು ಸರ್ಕಾರ ಯೋಜಿಸಿದೆಯೇ?

ಶ್ರೀ ಎಂ. ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಪುತ್ತೂರು ಸಹಾಯಕ ನಿರ್ದೇಶಕರ ಕಛೇರಿಗೆ ವಾಹನಗಳನ್ನು ಪುಸಕ್ತ 97-98ನೇ ಸಾಲಿನಲ್ಲಿ ಒದಗಿಸಲು ಕ್ರಮಕೈಗೊಳ್ಳಲಾಗುವುದು.

ಮೀನುಗಾರಿಕೆ ಇಲಾಖೆಯಿಂದ ಮಂಜೂರಾತಿಯಾಗಿರುವ ಮನೆಗಳ ಪ್ರಗತಿ

2034 - ಶ್ರೀ ಬಿ. ಶಿವರಾಮು (ಗಂಡಸೀ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ಮಂಜೂರಾದ ಮೀನುಗಾರಿಕೆ ಮನೆಗಳೆಷ್ಟು?